






ಮಕ್ಕಳಿಗೆ ಖುಷಿಯೋ ಖುಷಿ. ಅವರು ಈಗಾಗಲೇ ಪರಿಸರ ಪ್ರೇಮಿಗಳಾಗಿದ್ದರು. ಎಲ್ಲರೂ ಹೊಸ ಅತಿಥಿಯನ್ನು ಆದರದಿಂದ ಬರಮಾಡಿಕೊಂಡಿದ್ದರು.

ಎಂಟು ಗಂಟೆಗೆ ಸರಿಯಾಗಿ ನಮ್ಮ ರಾಷ್ಟ್ರಧ್ವಜ ಹಾರಾಡುತ್ತಿದ್ದಂತೆಯೇ ಈ ಹದ್ದನ್ನು ಹುಷಾರು ಮಾಡುವ ಕೆಲಸಕ್ಕೆ ನನ್ನ ಮನ ಹಾರಾಡುತ್ತಿತ್ತು. ಹದ್ದು ಜೀವನ್ಮರಣ ಹೋರಾಟದಲ್ಲಿತ್ತು. ಬಂಡೀಪುರದ ನಮ್ಮ ಪಶುವೈದ್ಯರಾದ ಡಾ. ನಾಗರಾಜ್ ರವರಿಗೆ ಫೋನಾಯಿಸಿ ಹದ್ದಿಗೆ ಮದ್ದು ಏನು ಎಂದು ತಿಳಿದೆ. ಶಾಲೆಯ ಶುಶ್ರೂಶಕಿ ದೀಪ್ತಿಯ ಬಳಿ ಪ್ಯಾರಾಸೆಟಮಾಲ್, ಸಿಟ್ರಜನ್ ಮಾತ್ರೆಯನ್ನು ತರಿಸಿ ತುಂಬಾ ಕಡಿಮೆ ಪ್ರಮಾಣದಲ್ಲಿ ಕೊಡಲಾಯಿತು. ಶಾಲಾ ಮಕ್ಕಳ ಕಾರ್ಯಕ್ರಮದ ನಡುವೆ ಅರ್ಧ ಗಂಟೆಗೆ ಇದಕ್ಕೆ ಕಾಳು, ಗ್ಲುಕೋಸ್, ಮೊಟ್ಟೆ ತಿನ್ನಿಸುತ್ತಿದ್ದೆ.

ತೊಡೆಯ ಮೇಲೆ ಕುಳ್ಳಿರಿಸಿ ಮಗುವಿನಂತೆ ಇದರ ಬಾಯಿ ಅಗಲಿಸಿ ತಿನ್ನಿಸಬೇಕಿತ್ತು. ಪಾಪ ಅದರ ವೇದನೆ ನಮಗೆ ಹೇಗೆ ಗೊತ್ತಾಗಬೇಕು? ಅದಕ್ಕೆ ತಾನೇ ತಿನ್ನಲು ಆಗುತ್ತಿರಲಿಲ್ಲ, ಆದರೂ ಏನೂ ಮಾಡದೆ ತಿನ್ನುತ್ತಿತ್ತು. ಅಂತೂ ಇಂತೂ ಸಂಜೆ ಆಯಿತು. 6.30ಕ್ಕೆ ಮತ್ತೆ ಹದ್ದಿಗೆ ತಿಂಡಿ ತಿನಿಸಿ ಒಂದು ರಟ್ಟಿನ ಡಬ್ಬದಲ್ಲಿ ಮಲಗಿಸಿ ಪ್ರಾಂಶುಪಾಲರಾದ ಸವಿತಾ ಅವರ ಮನೆಯಲ್ಲಿ ಹದ್ದಿಗೆ ನೆಲೆ ಕಲ್ಪಿಸಲಾಯಿತು.

ಮರುದಿನ ಮುಂಜಾನೆ 7 ಗಂಟೆಗೆ ಹೆದರಿಕೆಯಿಂದಲೇ ಡಬ್ಬ ತೆಗೆದರೆ, ಸದ್ಯ ಹಕ್ಕಿ ಉಸಿರಾಡುತ್ತಿತ್ತು. ಪಿಳಿ ಪಿಳಿ ನೋಡುತ್ತಾ ಮೆಲ್ಲನೆ ಅದನ್ನು ಮೇಲೆತ್ತಿ ತಲೆ ನೇವರಿಸಿ ಮೊಟ್ಟೆ ತಿನ್ನಿಸಿದೆ. ಸುಮಾರು ಒಂದು ಮೊಟ್ಟೆಯನ್ನು 4 ಭಾಗ ಮಾಡಿ ತಿನ್ನಿಸಿದೆ. ಅದರೊಡನೆ ಮತ್ತೆ ಅದಕ್ಕೆ ಮಾತ್ರೆ ಕೊಡಲಾಯಿತು. ಹೀಗೆಯೇ ಎರಡು ದಿನ ಕಳೆಯಿತು.

ನಾಲ್ಕನೇ ದಿನ ಮುಂಜಾನೆ ಡಬ್ಬ ತೆರೆದರೆ ಅಲ್ಲಿ ಹದ್ದಿಲ್ಲ! ಎಲ್ಲಿ ಹೋಗಿದೆ ಎಂದು ಮನೆಯೆಲ್ಲಾ ಹುಡುಕಿದೆ. ಮಂಚದ ಕೆಳಗೆ, ಮೇಲೆ ಉಹೂ... ಟೀಪಾಯಿಯ ಕೆಳಗೆ ಅಡಗಿ ಕುಳಿತಿದ್ದ ಹದ್ದು ತುಸು ಚೇತರಿಸಿಕೊಂಡಿತ್ತು. ಈಗ ಎಲ್ಲರಿಗೂ ಧೈರ್ಯ ಬಂತು. ಆದರೂ ಅದಕ್ಕೆ ತಾನಾಗಿಯೇ ಏನೂ ತಿನ್ನಲು ಆಗುತ್ತಿರಲಿಲ್ಲ. ನಾವೇ ಬಾಯಿ ತೆರೆದು ತಿನ್ನಿಸಬೇಕಿತ್ತು. ಒಮ್ಮೆ ಹೀಗೆ ಮಾಡಲು ಹೋದಾಗ, ಜೋರಾಗಿ ನನ್ನ ಕೈಯನ್ನು ತನ್ನ ಕಾಲಿನಿಂದ ಹಿಡಿದ ರಭಸಕ್ಕೆ ಅದರ ಉಗುರು ತಾಗಿ ನನ್ನ ಕೈಗೆ ಗಾಯವಾಗಿತು. ಅದರ ಹಿಡಿತ ಬಿಡಿಸಿಕೊಳ್ಳಲು ಸಹಾಯ ಬೇಕಾಯಿತು.

ಐದನೇ ದಿನ ಬೆಳಿಗ್ಗೆ ಹದ್ದು ತಾನಾಗಿಯೇ ಒಂದು ಮೊಟ್ಟೆ ತಿಂದಿತ್ತು. ಅಂದು ಮೇಡಂ ಬೇರೆ ಊರಿಗೆ ಹೋಗಬೇಕಾದ್ದರಿಂದ ಇದನ್ನು ನಮ್ಮ ಮನೆಗೆ ತೆಗೆದುಕೊಂಡು ಹೋಗುವ ನಿರ್ಧಾರಕ್ಕೆ ಬಂದಿದ್ದೆ. ಇತ್ತ ಇದನ್ನು ಡಬ್ಬಕ್ಕೆ ಹಾಕುವ ತಯಾರಿಯಲ್ಲಿದ್ದೆ. ನೋಡ ನೋಡುತ್ತಿದ್ದಂತೆಯೇ ಮನೆಯಿಂದ ಹೊರಬಂದ ಹದ್ದಣ್ಣ, ಮೆಲ್ಲನೆ ಕುಪ್ಪಳಿಸುತ್ತಾ, ರೆಕ್ಕೆ ಬಡಿಯುತ್ತಾ, ಹೊರಗೆ ವ್ಯಾಯಾಮ ಮಾಡುತ್ತಿದ್ದ. ಅದರ ಕಣ್ಣು ಕತ್ತು, ಹೊರಜಗತ್ತಿನ ಹಕ್ಕಿಗಳ ಕೂಗಿಗೆ ಸ್ಪಂದಿಸುತ್ತಿತ್ತು. ಸುತ್ತಲೂ ಹಸಿರು ಪರಿಸರದ ನಮ್ಮ ಶಾಲೆಯಲ್ಲಿ ಹಸಿರು ಕಂಡೊಡನೆ ಹದ್ದಿನ ರೆಕ್ಕೆ ತನ್ನಿಂದ ತಾನೇ ಬಡಿದು, ಕಣ್ಮುಂದೆಯೇ ಹದ್ದು ಮೇಲೆ ಹಾರಿ ಹೋಯಿತು. ಅದು ತನ್ನ ಸರಹದ್ದನ್ನು ಸೇರಿತ್ತು.

ನಭದಲ್ಲಿ ಹಾರುತ್ತಾ ಒಂದು ಸುತ್ತು ಬಂತು. ಬಹುಶಃ ಅದು ನಮಗೆ ವಂದನೆ ಸಲ್ಲಿಸಿರಬೇಕು. ಸುತ್ತುತ್ತಾ ಹಾರಿ ಮೇಲೇರಿ ದೊಡ್ಡ ಹದ್ದು ಆಗಸದಲ್ಲಿ ಸಣ್ಣ ಚುಕ್ಕೆಯಂತಾಯಿತು. ಒಂದು ದಿನದ ಮಟ್ಟಿಗೆ ನಾನೂ ಒಬ್ಬ ಡಾಕ್ಟರಾದೆ. ಗಾಳಿಯಲ್ಲಿ ಹದ್ದು ತೇಲುತ್ತಿದ್ದಂತೆಯೇ ನನ್ನ ಮನವೂ ಸಂತಸದಿಂದ ತೇಲಿತು.

**ನಾಲ್ಕನೇ ದಿನ ಮುಂಜಾನೆ ಡಬ್ಬ ತೆರೆದರೆ ಅಲ್ಲಿ ಹದ್ದಿಲ್ಲ! ಎಲ್ಲಿ ಹೋಗಿದೆ ಎಂದು ಮನೆಯೆಲ್ಲಾ ಹುಡುಕಿದೆ.**